# ಎಚ್.ಎಲ್. ಪುಷ್ಪರವರ ಕಾವ್ಯಗಳಲ್ಲಿ ಪ್ರತಿಮೆಗಳು ಹಾಗೂ ಆಶಯಗಳು

**ಮಂಜುನಾಥ ಹೆಚ್.***

**DOI: https://doi.org/10.5281/zenodo.21242220**

**ABSTRACT**

ಕವಯಿತ್ರಿ ಎಚ್.ಎಲ್. ಪುಷ್ಪ ಅವರ ಕಾವ್ಯಗಳಲ್ಲಿ ಬಳಕೆಯಾಗಿರುವ ವಿವಿಧ ಪ್ರತಿಮೆಗಳು ಮತ್ತು ಅವುಗಳ ಹಿಂದಿರುವ ಸ್ತ್ರೀಪರ ಆಶಯಗಳನ್ನು ಇಲ್ಲಿ ತಾತ್ವಿಕವಾಗಿ ವಿಶ್ಲೇಷಿಸಲಾಗಿದೆ. ಪುರುಷಪ್ರಧಾನ ಸಮಾಜವು ಸಾಂಪ್ರದಾಯಿಕವಾಗಿ ನಿಸರ್ಗದ ಅಂಶಗಳನ್ನು (ಭೂಮಿ, ನದಿ) ಹೆಣ್ಣಿಗೆ ಹಾಗೂ ಅಧಿಕಾರದ ಸಂಕೇತಗಳನ್ನು ಗಂಡಿಗೆ ಸಮೀಕರಿಸುವ ಬಗೆಯನ್ನು ಪ್ರಶ್ನಿಸುತ್ತಲೇ, 'ಪರಿಸರ ಸ್ತ್ರೀವಾದ'ದ (Ecofeminism) ನೆಲೆಯಲ್ಲಿ ಹೆಣ್ಣು ಮತ್ತು ಪ್ರಕೃತಿಯ ಮೇಲಾಗುತ್ತಿರುವ ನಿರಂತರ ಶೋಷಣೆಯನ್ನು ಚರ್ಚಿಸಲಾಗಿದೆ. ಪುಷ್ಪರವರ 'ಲೋಹದ ಕಣ್ಣು', 'ಎರಡು ರೇಖೆಗಳು', 'ರಾತ್ರಿ ರಾಣಿ' ಮುಂತಾದ ಕವಿತೆಗಳಲ್ಲಿ ಬರುವ ಆಮೆ, ಹಕ್ಕಿ, ಮಲ್ಲಿಗೆ, ಮತ್ತು ಕಡಲಿನಂತಹ ರೂಪಕಗಳು ಮಹಿಳೆಯರ ಆಂತರಿಕ ತಲ್ಲಣಗಳು, ಮುಚ್ಚಿಟ್ಟ ಭಾವನೆಗಳು ಹಾಗೂ ಸಂಬಂಧಗಳ ಯಾಂತ್ರಿಕತೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ಧ್ವನಿಸುತ್ತವೆ. ಲಿಂಗಭೇದದ ಸಾಂಪ್ರದಾಯಿಕ ಪ್ರತಿಮೆಗಳನ್ನು ಬಳಸಿಕೊಂಡರೂ, ಅಂತಿಮವಾಗಿ 'ಸ್ತ್ರೀ ಅನನ್ಯತೆ'ಯ ನಿರಂತರ ಹುಡುಕಾಟವೇ ಅವರ ಕಾವ್ಯದ ಮೂಲಭೂತ ಆಶಯ ಎಂಬುದನ್ನು ಈ ಅಧ್ಯಯನವು ಸ್ಪಷ್ಟಪಡಿಸುತ್ತದೆ.

**KEYWORDS:** ಎಚ್.ಎಲ್. ಪುಷ್ಪ, ಕಾವ್ಯ ಪ್ರತಿಮೆಗಳು, ಪರಿಸರ ಸ್ತ್ರೀವಾದ, ಸ್ತ್ರೀ ಅನನ್ಯತೆ, ಸ್ತ್ರೀಪರ ಆಶಯ.

* **ಡಾ. ಮಂಜುನಾಥ ಹೆಚ್.**, ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಧುಗಿರಿ.

ಕಾವ್ಯದಲ್ಲಿ ಮಹಿಳಾ ಕವಿಗಳು ತಮ್ಮ ಭಾವ, ವಿಚಾರಗಳನ್ನು ಹಲವು ರೀತಿಗಳಲ್ಲಿ ವ್ಯಕ್ತಮಾಡುತ್ತಾರೆ. ಹಾಗೆಯೇ ಎಚ್.ಎಲ್. ಪುಷ್ಪರವರು ತಮ್ಮ ವಿಚಾರಗಳನ್ನು ಭಾವಗಳನ್ನು ಹೇಳಲು ಕಾವ್ಯ ಪ್ರತಿಮೆಗಳನ್ನು ಬಳಸಿಕೊಂಡಿದ್ದಾರೆ. ಪುಷ್ಪರವರ ಕಾವ್ಯ ಭಾಷೆ ಅಲ್ಲಮನ ಪ್ರಭಾವದಲ್ಲಿ ರೂಪುಗೊಂಡಿದೆ. ಭೂಮಿ, ನದಿ, ಕಡಲು, ಲೋಹದ ಕಣ್ಣು, ಎರಡು ರೇಖೆಗಳು, ರಂಗಮಂಚ, ಬಳ್ಳಿ, ಹಂದರ ಇಂತಹ ಅನೇಕ ಪ್ರತೀಕಗಳನ್ನು ಬಳಸಿಕೊಂಡು ಕಾವ್ಯಗಳನ್ನು ರಚಿಸಿದ್ದಾರೆ.

ಪ್ರಕೃತಿಯಲ್ಲಿ ಕಾಣುವಂತಹ ವಸ್ತುಗಳನ್ನು ಪ್ರತಿಮೆಗಳಾಗಿ ಬಳಸಿಕೊಳ್ಳಲಾಗುತ್ತದೆ. ಆದರೆ ಇಂತಹ ಪ್ರತಿಮೆಗಳನ್ನು ಬಳಸಿಕೊಳ್ಳುವಾಗಿನ ತಾರತಮ್ಯವೇನೆಂದರೆ ಯಾವುದು ಅಧಿಕಾರವನ್ನು ನಿರ್ಧರಿಸುತ್ತದೆಯೋ ಯಾವುದು ಸ್ವಾತಂತ್ರ್ಯವನ್ನು ಹೊಂದಿರುತ್ತದೆಯೋ ಅಂತಹ ಪ್ರತಿಮೆಯನ್ನು ಪುರುಷರಿಗೆ ಹೋಲಿಸಿಕೊಂಡು ಯಾವುದು ಸ್ವತಂತ್ರವಲ್ಲದುದ್ದು, ಯಾವ ವಸ್ತು ಬೇರೆಯ ಆಶ್ರಯವನ್ನು ಪಡೆಯುತ್ತದೆಯೋ, ಅಂತಹ ವಸ್ತುಗಳನ್ನು ಸ್ತ್ರೀಯರಂತೆ ಬಿಂಬಿಸುತ್ತಾರೆ. ಇಂತಹ ಚಿಂತನೆಗಳು ಪುರುಷ ಕೇಂದ್ರಿತ ಚಿಂತನೆಯಿಂದಲೇ ಶುರುವಾದ ಮಾದರಿಗಳಾಗಿವೆ. ಇಂತಹ ಚಿಂತನೆಗಳನ್ನು ನಡೆಸುವಾಗ ಯಾಕೆ ಹೀಗೆ? ಎಂದು ಕೇಳಿದರೆ ಅದಕ್ಕೂ ಉತ್ತರಗಳು ಸಿದ್ಧವಾಗಿರುತ್ತವೆ. ಭೂಮಿಯೆಂದರೆ ಹೆಣ್ಣು, ಭೂಮಿಗೂ, ಹೆಣ್ಣಿಗೂ ಸೃಷ್ಟಿಸುವ ಶಕ್ತಿಯಿದೆ. ಅದಕ್ಕೆ ಭೂಮಿಗೆ ಹೋಲಿಸಿದ್ದೇವೆ ಎನ್ನುವ ಉತ್ತರವೇ ದೊರೆಯುತ್ತದೆ. ಆದರೆ ಪುರಾಣ ಪ್ರತೀಕವಾದ ಶಿವ ಪಾರ್ವತಿಯರ ಕಲ್ಪನೆಗಳನ್ನು ತೆಗೆದುಕೊಂಡರೆ ಶಿವ ಬೇರೆಯಲ್ಲ, ಪಾರ್ವತಿ ಬೇರೆಯಲ್ಲ ಎಂಬ ಪರಿಕಲ್ಪನೆಗಳಿವೆ. ಅಂದರೆ ಅಲ್ಲಿ ಶಿವ ಗಂಡು, ಪಾರ್ವತಿ ಹೆಣ್ಣು ಎಂದಿದ್ದರೂ ಅವರು ಬೇರೆ ಎಂದು ಹೇಳುವುದಿಲ್ಲ. ವಾಸ್ತವವಾಗಿ ನೋಡಿದರೆ ಗಂಡು ಹೆಣ್ಣು ಬೇರೆಯೇ ಎಂದು ನಿರ್ಧರಿತವಾಗಿದೆ. ಆದರೆ ಇತ್ತೀಚಿನ ದಿನಮಾನಗಳಲ್ಲಿಯೂ ಈ ಪ್ರತಿಮೆಗಳನ್ನು ಬಳಸಿಕೊಳ್ಳುವುದು ಹೆಚ್ಚಾಗಿದೆ.

ಇತ್ತೀಚಿನ ದಿನಗಳಲ್ಲಿಯೂ ಇಂತಹ ಪ್ರತಿಮೆಗಳನ್ನು ಬಳಸಿಕೊಂಡೇ ಕಾವ್ಯ ರಚಿಸಲಾಗುತ್ತದೆ. ಭೂಮಿಯನ್ನು ಹೆಣ್ಣಿಗೆ ಹೋಲಿಸಿಕೊಂಡು, ಆಕಾಶವನ್ನು ಗಂಡಿಗೆ ಹೋಲಿಸಿಕೊಂಡು ಕಾವ್ಯ ರಚಿಸಲಾಗುತ್ತಿದೆ. ನೆಲದೊಂದಿಗೆ ಹೆಣ್ಣನ್ನು ಸಮೀಕರಿಸಿ ಮಾತನಾಡುತ್ತಾರೆ. ಪುಷ್ಪರವರು ಸಹ ಭೂಮಿಯ ಪ್ರತಿಮೆಯನ್ನು ಹೆಣ್ಣಿಗೆ ಹೋಲಿಸಿ ಮಾತನಾಡುತ್ತಾರೆ. ಪುಷ್ಪರವರ ಲೋಹದ ಕಣ್ಣು ಎನ್ನುವ ಕವನದಲ್ಲಿ ಲೋಹದ ಕಣ್ಣು ಎನ್ನುವುದು ಸಹ ಪ್ರತಿಮೆಯಾಗಿದೆ. ಮಾನವ ಹೇಗೆ ಸಂಬಂಧಗಳ ಬೆಲೆ ಕಳೆದುಕೊಂಡು ಯಾಂತ್ರಿಕವಾಗುತ್ತಾನೆ ಎನ್ನುವುದನ್ನು ಲೋಹದ ಕಣ್ಣು ಪ್ರತಿಮೆಯ ಮೂಲಕ ಹೇಳುತ್ತಾರೆ.

ಕಡಲು ಮತ್ತು ನದಿ ಪ್ರತಿಮೆಗಳನ್ನು ಸಹ ಹೆಣ್ಣು ಗಂಡಿನ ನೆಲೆಯಲ್ಲಿಯೇ ಬಳಸಿಕೊಳ್ಳಲಾಗುತ್ತದೆ. ಕಡಲು ಎಂದರೆ ವಿಶಾಲವಾಗಿರುವಂತಹದ್ದು, ನದಿ ಎನ್ನುವುದು ಚಿಕ್ಕದು. ಜೊತೆಗೆ ನದಿ ಕಲ್ಮಶವನ್ನು ತನ್ನೊಳಗೆ ಸೇರಿಸಿಕೊಂಡು ಒಳ್ಳೆಯದನ್ನು ಪ್ರಕೃತಿಗೆ ನೀಡುವ ಔದಾರ್ಯದ ಜೊತೆ ಜೊತೆಗೆ ಹೆಣ್ಣಿನ ಜೀವಪರ ನಿಲುವನ್ನು ಕಾವ್ಯದಲ್ಲಿ ಕಾಣಿಸುತ್ತಾರೆ. ನದಿ ಕಡಲನ್ನು ಸೇರಲೇಬೇಕು, ಹೆಣ್ಣು ಗಂಡನ್ನು ಸೇರಲೇಬೇಕು ಎಂಬಂತಹ ನೆಲೆಯಲ್ಲಿಯೇ ಕಾವ್ಯ ರಚಿಸುತ್ತಾರೆ.

ಪುಷ್ಪರವರು ಬಳಸಿಕೊಳ್ಳುವಂತಹ ಪ್ರತಿಮೆಗಳೆಂದರೆ ಲೋಹದ ಕಣ್ಣು, ನದಿ, ಭೂಮಿ, ಲತೆ, ಹಂದರ, ತೆರೆದ ಬಾಗಿಲು, ರಾತ್ರಿ ರಾಣಿ, ನವಿಲು, ಮಂಜು, ಎರಡು ರೇಖೆಗಳು, ರಂಗಮಂಚ, ಸಾಲುಮರ, ಆಮೆ, ಮುಂತಾದವುಗಳಾಗಿವೆ.

ನಮ್ಮ ಸಂಸ್ಕೃತಿಯು ಭೂಮಿ ಮತ್ತು ಹೆಣ್ಣನ್ನು ಒಟ್ಟಿಗೆ ಕಾಣುತ್ತದೆ. ಏಕೆಂದರೆ ಇಬ್ಬರಿಗೂ ಸೃಷ್ಟಿಸುವ ಶಕ್ತಿ ಇದೆ ಎಂದು. ಇಂತಹ ಸೃಷ್ಟಿಸುವ ಶಕ್ತಿಯೇ ಅನಾನುಕೂಲವಾಗಿ ಪರಿಣಮಿಸಿರುವುದು ಪುರಾಣ, ಇತಿಹಾಸದುದ್ದಕ್ಕೂ ಕಾಣುತ್ತೇವೆ. ದೆಹಲಿಯಲ್ಲಿ ಹೆಣ್ಣುಮಗಳೊಬ್ಬಳ ಮೇಲೆ ಈಚೆಗೆ ನಡೆದ ಬರ್ಬರ ಅತ್ಯಾಚಾರ ಪ್ರಸಂಗವೊಂದನ್ನು ನೆನಪಿಸಿಕೊಳ್ಳಬಹುದು. ದೇಶದೆಲ್ಲೆಡೆ ಇಂತಹ ಅತ್ಯಾಚಾರ ಕೃತ್ಯಗಳು ನಿರಂತರವಾಗಿ ನಡೆಯುತ್ತಿವೆ. ಈ ಮಾತು ಭೂಮಿಯ ಮಟ್ಟಿಗೂ ಸತ್ಯ. ಅನೇಕ ಬಗೆಗಳಲ್ಲಿ ಮಣ್ಣಿನ ಮೇಲೆ ವಿಶ್ವದೆಲ್ಲೆಡೆ ಅತ್ಯಾಚಾರ ನಡೆಯುತ್ತಲೇ ಇದೆ. ಬಳ್ಳಾರಿಯ ಗಣಿಗಳಿಂದ ಹಿಡಿದು ತೈಲ ರಾಷ್ಟ್ರಗಳ ಪೆಟ್ರೋಲಿಯಂ ಬಾವಿಗಳು, ಅಮೇಜಾನ್‌ನ ಮಳೆಕಾಡುಗಳವರೆಗೆ ಎಲ್ಲೆಡೆಯೂ ಈ ಶೋಷಣೆಯನ್ನು ಕಾಣಬಹುದು. ಹೀಗಾಗಿ ಹೆಣ್ಣಿನಂತೆ ಭೂಮಿಯು ಸಹ ಸಂತ್ರಸ್ತೆಯಾಗಿದ್ದಾಳೆ. ಭೂಮಿ ಮತ್ತು ಹೆಣ್ಣನ್ನು ಸಮೀಕರಿಸಿ ನೋಡುವ ಎಕೋಫೆಮಿನಿಸಂ ಪರಿಕಲ್ಪನೆ ಶುರುವಾದದ್ದು ಫ್ರಾನ್ಸ್‌ನಲ್ಲಿ ಮೊದಲಿಗೆ ಎನ್ನಬಹುದು. ನಂತರ ಕನ್ನಡಕ್ಕೆ ವಂದನಾ ಶಿವರವರು ಈ ಎಕೋಫೆಮಿನಿಸಂ ಪರಿಕಲ್ಪನೆ ತಂದ ಮೊದಲಿಗರಾಗಿದ್ದಾರೆ. ಪುಷ್ಪರವರು ಲೋಹದ ಕಣ್ಣು ಕಾವ್ಯಲೋಕದ ಪುಷ್ಪವತಿಯಾದರೇನಂತೆ........ ಎನ್ನುವ ಪದ್ಯದ ಸಾಲುಗಳನ್ನು ನೋಡಬಹುದು.

**"ಕಕ್ಕುತ್ತಾ ಎಲ್ಲಾ ಸತ್ತೆಗಳ**
**ಮತ್ತೆ ಮರುಜೀವ ಪಡೆಯುತ್ತಾ**
**ಅನುವಾಗುತ್ತಾಳೆ ಈ ಪುಷ್ಪವತಿ**
**ಸಮೃದ್ಧಳಾಗುತ್ತಾಳೆ ಸುರಿವ ಮಳೆಗೆ**
**ಬಿತ್ತುವ ಬಿತ್ತಕ್ಕೆ, ಆಕಾಶದ ಮೊರೆತಕ್ಕೆ**
**ಒಂದೊಡೆದು ಎರಡಾಗುವುದಕ್ಕೆ**
**ಇವಳ ಅಡುಗೆ ಮನೆಯಲ್ಲಿ**
**ತಾನೇ ಅರ್ಥಮಸೆದ ಕತ್ತಿ**
**ಆಟಕ್ಕೆ ಹುಟ್ಟಿಕೊಂಡ ಆಟಂಬಾಂಬ್**
**ತೋಟದಲ್ಲಿ ಫಲಕೊಡುತ್ತಿರುವ ಗುಂಡಿನ ಗಿಡ**
**ಗರ್ಭಕ್ಕೆ ಒದ್ದ ಹರಾಮಿ ಸಂಚಿನ**
**ದಗಲ್ಬಾಜಿ ಗಂಡು ಸಂತಾನ"[1]**

ಜಾತ್ರೆಯಲ್ಲಿ ಜೊತೆಯಾದವರು ಎರಡು ರೇಖೆಗಳು ಎನ್ನುವ ಕಾವ್ಯದಲ್ಲಿ ಜಾತ್ರೆ, ರೇಖೆ ಎನ್ನುವುದು ಪ್ರತಿಮೆಗಳಾಗಿವೆ. ಜಾತ್ರೆ ಎನ್ನುವುದು ಬದುಕಿನ ಜಂಜಾಟಗಳನ್ನು ಸೂಚಿಸುತ್ತದೆ. ಜಂಜಾಟಗಳಲ್ಲಿ ಪಾತ್ರ ವಹಿಸಲು ಗಂಡು ಹೆಣ್ಣು ಒಂಟಿಯಾಗಿ ಬಂದು ಜೊತೆಯಾಗುವ ಆಶಯವನ್ನು ಜಾತ್ರೆಯಲ್ಲಿ ಜೊತೆಯಾದವರು ಎನ್ನುವ ಕಾವ್ಯದಲ್ಲಿ ಕಾಣಬಹುದು.

**"ಒಂಟಿಯಾಗೇ ಬಂದರೂ**
**ಅವರು ಜಾತ್ರೆಗೆಂದು ಬದಿಗೆ ಸರಿಸಿ**
**ಅವಳ ಸಂಸಾರ ಅವಳು**
**ಇವನ ಸಂಸಾರ ಇವನು**
**ಜೊತೆಯಾದರೂ ಲೆಕ್ಕಚಾರವಿಲ್ಲದೆ"[2]**

ಎರಡು ರೇಖೆಗಳು ಎನ್ನುವುದು ಪ್ರತಿಮೆ ಗಂಡು–ಹೆಣ್ಣನ್ನು ಸೂಚಿಸುತ್ತದೆ. ಸ್ವಾತಂತ್ರ್ಯ ನಂತರದಲ್ಲಿ ಅಥವಾ ರಾಷ್ಟ್ರೀಯವಾದಿ ಚಳುವಳಿಯ ಸಂದರ್ಭದಲ್ಲಿ ಗಂಡು ಹೆಣ್ಣಿ ಸಂಬಂಧವು ಸಮಾಂತರ ರೇಖೆಯಲ್ಲಿ ಚಲಿಸುವ ಸಂದರ್ಭ ಎದುರಾಗಿತ್ತು. ಈ ಸಮಾಂತರ ರೇಖೆಗಳು ಸೇರುವುದಕ್ಕೆ ಜಾತಿ, ಮತ, ಭಾಷೆ, ಹೇಗೆ ಅಡ್ಡಬರುತ್ತದೆ ಎಂದು ಎರಡು ರೇಖೆಗಳು ಎಂಬ ಕವನದಲ್ಲಿ ಕಾಣಬಹುದು.

**“ಆ ಎರಡು ರೇಖೆಗಳು**
**ಒಂದನ್ನೊಂದು ಕಾಡಿದವು ಬೇಡಿದವು**
**ನಿರಂತರ ಸಖ್ಯಕ್ಕಾಗಿ ಕುದಿದವು ಸಾಮೀಪ್ಯಕ್ಕಾಗಿ**
**ಛೇದಿಸಿದವು, ಪರಸ್ಪರ ಗೀರಿಕೊಂಡವು**
**ಅರಿವಿಲ್ಲದೆ ದೂರವಾಗುತ್ತಲೇ ಹೋದವು”[3]**

ರಾತ್ರಿ ರಾಣಿ ಎಂಬ ಪ್ರತಿಮೆ ಹೆಣ್ಣನ್ನು ಆಕೆಯ ಮನಸ್ಸನ್ನು ಪ್ರತಿಬಿಂಬಿಸುತ್ತದೆ. ರಾತ್ರಿ ರಾಣಿಯೆಂದು ಮಲ್ಲಿಗೆ ಹೂವನ್ನು ಕರೆಯುತ್ತಾರೆ. ಮಲ್ಲಿಗೆ ಹೂವು ರಾತ್ರಿ ಅರಳಿ ಅದರ ಕಂಪನ್ನು ಸೂಸಿದಂತೆ ಹೆಣ್ಣಿನ ಮನಸ್ಸು ಸಹ ಮೊಗ್ಗಿನಂತೆ ಆ ಮೊಗ್ಗಿನ ಮನಸ್ಸು ಅರಳುವುದು ರಾತ್ರಿ ಸಮಯದಲ್ಲಿ ಎನ್ನುವುದನ್ನು ರಾತ್ರಿರಾಣಿ ಕಾವ್ಯದಲ್ಲಿ ಕಾಣಬಹುದು.

**“ರಾತ್ರಿ ರಾಣಿಯರೇ ಹೀಗೆ**
**ಹೊತ್ತಲದ ಹೊತ್ತಲ್ಲಿ**
**ಮೂಡುವ ಮೊಗ್ಗು ಮೊಗ್ಗು**
**ಕನಸುಗಳ ಹಾಗೆ”[4]**

ಆಮೆಗಳು ಎನ್ನುವುದು ಹೆಣ್ಣಿನ ಸಂಕೇತವಾಗಿದೆ. ಆಮೆ ತನ್ನ ಚಿಪ್ಪಿನೊಳಗೆ ಹೇಗೆ ಬಚ್ಚಿಟ್ಟುಕೊಂಡಿರುತ್ತದೆಯೋ ಹಾಗೆಯೇ ಹೆಣ್ಣಿನ ಮನಸ್ಸು ಕೂಡ ಯಾವಾಗಲೂ ಮುಚ್ಚಿಟ್ಟುಕೊಂಡಿರುತ್ತದೆ. ಹೆಣ್ಣು ತನ್ನ ಆಸೆಗಳನ್ನು, ಭಾವನೆಗಳನ್ನು, ಕನಸುಗಳನ್ನು ತನ್ನ ಮನಸ್ಸಿನಲ್ಲಿ ಮುಚ್ಚಿಟ್ಟುಕೊಂಡಿರುತ್ತಾಳೆ. ಪುರಾಣದಿಂದಲೂ ಈ ಕ್ರಿಯೆಯೇ ಮುಂದುವರೆಯುತ್ತಿದೆ. ಆದ್ದರಿಂದಲೇ ಪುಷ್ಪರವರು ಕೇಳುತ್ತಾರೆ.

**“ತನ್ನ ಚಿಪ್ಪೊಳಗೆ ನುಗ್ಗುವ ಆಮೆ**
**ಎಂದು ಬಂದೀತು ಹೊರಕ್ಕೆ**
**ನೀರ ಬಿಟ್ಟು ಮೇಲಕ್ಕೆ”[5]**

ನಿಗೂಢಮೌನಗಳು ಕವಿತೆಯಲ್ಲಿ ಹಕ್ಕಿ, ಪಂಚವರ್ಣದ ಹಕ್ಕಿ, ಅರೆಬಿರಿದ ಮೊಗ್ಗುಗಳು, ನಿತ್ಯ ಹರಿದ್ವರ್ಣದ ಕಾಡುಗಳು ಎನ್ನುವ ಪ್ರತಿಮೆಗಳನ್ನು ಬಳಸಿಕೊಂಡಿದ್ದಾರೆ. ಅವ್ಯಕ್ತವಾದ ಪ್ರೀತಿಯ ಧಾರೆಗಳನ್ನು, ಭಾವ ದೀಪ್ತಿಯನ್ನು ಅಲಂಕಾರಿಕವಾಗಿಯೇ ಹರಳು ಗಟ್ಟಿಸಿದ ಅಭಿವ್ಯಕ್ತಿ ಇಲ್ಲಿದೆ. ತೆರೆದು ನಿಂತ ಮಾತು, ತೇಲಿ ಬರುವ ಹಕ್ಕಿ, ಕಾಯುವ ಕೊಳಲು, ಕಾಯುತ್ತಿರುವ ಯಮುನೆ, ಹಾರಲು ಕಾಯುತ್ತಿರುವ ಪಂಚವರ್ಣದ ಹಕ್ಕಿ ಈ ಎಲ್ಲಾ ಶಬ್ದ ಚಿತ್ರಗಳು ಪ್ರೀತಿಯ ಕಾತರ, ಕಾಯುವಿಕೆ, ಹಾರಾಟಗಳನ್ನು ಹೇಳುವುದಲ್ಲದೆ ಕಾವ್ಯ ಸೃಷ್ಟಿಯ ಕಾತರ– ಕಾಯುವಿಕೆ–ಹಾರಾಟಗಳನ್ನು ಹೇಳುತ್ತಿವೆ. ಈ ಕವಿತೆಯಲ್ಲಿ ಮನುಷ್ಯ ಕುಲವನ್ನು ಕೈಹಿಡಿದು ನಡೆಸುವ ಶಕ್ತಿ ಪ್ರೀತಿಗೆ ಮತ್ತು ಕಾವ್ಯಕ್ಕೆ ಇದೆಯೆಂಬುದನ್ನು ತಿಳಿಸುತ್ತದೆ.

**“ತೆರೆದು ನಿಂತಿವೆ ಮಾತು**
**ದೂರದಲ್ಲೆಲ್ಲೋ ತೇಲಿ ಬರುವ**

**ಹಕ್ಕಿಯ ಹಾಗೆ**
**ಅವಳ ಗುಲಾಬಿ ಕೆನ್ನೆಗಳ**
**ನಗುವ ಮೌನ**
**ಕಾಯುತ್ತಿದೆ ಕೊಳಲು**
**ಕಾಯುತ್ತಿದ್ದಾಳೆ ಯುಮುನೆ**
**ಸದ್ದುಗದ್ದಲವಿಲ್ಲದ ಕತ್ತಲಲ್ಲಿ**
**ಹಾರಲು ಕಾಯುತ್ತಿದೆ**
**ಪಂಚವರ್ಣದ ಹಕ್ಕಿ**
**ಹರಿದ ಕನಸುಗಳ ಗೋರಿಯ ಮೇಲೆ"**[6]

ಒಟ್ಟಾರೆಯಾಗಿ ಕಾವ್ಯ ಪ್ರತಿಮೆಗಳು ಅದರ ಆಶಯಗಳು ಹೆಚ್ಚಾಗಿ ಗಂಡು ಮತ್ತು ಹೆಣ್ಣಿನ ನೆಲೆಯಲ್ಲಿಯೇ ರೂಪಿತವಾದವುಗಳಾಗಿವೆ ಎನ್ನಬಹುದು ಕಾವ್ಯಗಳಲ್ಲಿ ರೂಪಕಗಳನ್ನು ಅಥವಾ ಪ್ರತಿಮೆಗಳನ್ನು ನೀಡುವಾಗ ಅದರಲ್ಲಿಯೂ ಸಹ ಭೇದ ಮಾಡುತ್ತಾರೆ. ಅಂದರೆ, ಸ್ತ್ರೀ ಪುರುಷ ಎಂದು ಲಿಂಗಭೇದ ಮಾಡುವಂತೆ ಯಾವ ಪ್ರತಿಮೆ ಅಧಿಕಾರವನ್ನು ಸೂಚಿಸುತ್ತದೆಯೋ ಅದು ಗಂಡನ್ನು ಸೂಚಿಸುವಂತೆ, ಅಡಿಯಾಳಾಗಿ ಹೆಣ್ಣಿನ ಚಿತ್ರಣವನ್ನು ಪ್ರತಿಮೆಗಳ ಮುಖಾಂತರವಾಗಿ ವಿವರಿಸುವುದನ್ನು ಕಾವ್ಯದಲ್ಲಿ ಕಾಣಬಹುದು. ಅಂತಹ ಪ್ರತಿಮೆಗಳನ್ನು ಪುಷ್ಪರ ಕಾವ್ಯದಲ್ಲಿಯೂ ಕಾಣಬಹುದು. ಆದರೆ ಪುಷ್ಪರವರ ಕಾವ್ಯದಲ್ಲಿ ಇಂತಹ ಪ್ರತಿಮೆಗಳನ್ನು ಬಳಸಿಕೊಂಡಿದ್ದರೂ ಸಹ ಅದರ ಆಶಯಗಳು ಸ್ತ್ರೀಪರ ನಿಲುವಿನಲ್ಲಿಯೇ ರಚಿತವಾಗಿದೆ. ಕವಿತೆಗಳಲ್ಲಿ ಸ್ತ್ರೀ ಅನನ್ಯತೆಯ ಹುಡುಕಾಟವೇ ಮುಖ್ಯವಾಗಿರುವುದನ್ನು ಕಾಣಬಹುದು.

**ಅಡಿ ಟಿಪ್ಪಣಿಗಳು:**

1. ಪುಷ್ಪ ಎಚ್.ಎಲ್., (2006), ಲೋಹದ ಕಣ್ಣು, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು, ಪು.ಸಂ. 88–89
2. ಅದೇ, ಪು.ಸಂ. 35–37
3. ಅದೇ, ಪು.ಸಂ. 92–93
4. ಅದೇ, ಪು.ಸಂ. 20–21
5. ಅದೇ, ಪು.ಸಂ. 41
6. ಅದೇ, ಪು.ಸಂ. 24